# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 953 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 17.12.2024 |
| ಉತ್ತರಿಸುವವರು | : | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಭಾರತದ ಸರ್ವೋಚ್ಚ ನ್ಯಾಯಾಲಯ ತನ್ನ ದಿನಾಂಕ: 25.07.2024 ರ ತೀರ್ಪಿನಲ್ಲಿ ರಾಜ್ಯ ಸರ್ಕಾರಗಳಿಗೆ ರಾಜ್ಯಗಳಲ್ಲಿ ನಡೆಯುವ ಗಣಿ ಕೈಗಾರಿಕೆಗಳಿಗೆ ರಾಜಧನ (Royalty) ಮತ್ತು ಹೆಚ್ಚಿನ ತೆರಿಗೆ (Additional Cess) ವಿಧಿಸುವ ಹಕ್ಕು Mines and Minerais Development and Regeneration Act of 1957 ಅಡಿಯಲ್ಲಿ ಇದೆ ಎಂದು ಎತ್ತಿಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಹಾಗಿದ್ದಲ್ಲಿ, ಈ ತೀರ್ಪಿನ ಸಾರಾಂಶವೇನು; ಈ ತೀರ್ಪಿನನ್ವಯ ರಾಜ್ಯ ಸರ್ಕಾರ ಜರುಗಿಸಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 25.07.2024 ಮತ್ತು 14.08.2024 ರಲ್ಲಿ ತೆರಿಗೆ ವಿಧಿಸಲು ರಾಜ್ಯ ಶಾಸಕಾಂಗಕ್ಕೆ ಇರುವ ಅಧಿಕಾರದ ಬಗ್ಗೆ ನೀಡಿದ ಆದೇಶದ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:<br>I. ದೇಶದ ಹಣಕಾಸಿನ ಸಂಯುಕ್ತ ವ್ಯವಸ್ಥೆಯಲ್ಲಿ (Fiscal Federalism) ಸಾಂವಿಧಾನಿಕ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಸಾಕಷ್ಟು ಹಣಕಾಸಿನ ಸಂಪನ್ಮೂಲಗಳ ಅವಶ್ಯಕತೆ ಇರುತ್ತದೆ. ರಾಜ್ಯ ಸರ್ಕಾರಗಳ ತೆರಿಗೆ ವಿಧಿಸುವ ಅಧಿಕಾರದ ವ್ಯಾಪ್ತಿಯನ್ನು ಕಡಿತಗೊಳಿಸಿದಲ್ಲಿ ರಾಜಸ್ವ ಸಂಗ್ರಹಣೆಯ ಮೇಲೆ ಪ್ರಭಾವ ಬೀರುತ್ತದೆ ಹಾಗೂ ಇದರಿಂದಾಗಿ ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಯೋಜನೆಗಳ ಮೇಲೆಯೂ ಸಹ ಪರಿಣಾಮ ಬೀರುತ್ತದೆ.<br>II. ರಾಜಧನವು ತೆರಿಗೆಯಲ್ಲ: ಗಣಿಗುತ್ತಿಗೆದಾರರು ಒಪ್ಪಂದದನ್ವಯ ಸರ್ಕಾರಕ್ಕೆ ಪಾವತಿಸುವ ಮೊತ್ತವೆಂದು ಪರಿಗಣನೆಯಾಗಿದೆ.<br>III. ಖನಿಜ ಹಕ್ಕುಗಳ ಮೇಲೆ ತೆರಿಗೆ ವಿಧಿಸುವ ಶಾಸಕಾಂಗ ಅಧಿಕಾರವು ರಾಜ್ಯ ಶಾಸಕಾಂಗಗಳಿಗೆ ಇರುತ್ತದೆ.<br>IV. ರಾಜ್ಯ ಶಾಸಕಾಂಗಕ್ಕೆ ಭಾರತದ ಸಂವಿಧಾನದ ಪಟ್ಟಿ II ರ ನಮೂದು 49 ಮತ್ತು 50 ರಡಿ ಈ ಕೆಳಗಿನಂತೆ ತೆರಿಗೆ ವಿಧಿಸಲು ಅಧಿಕಾರವಿರುತ್ತದೆ. |

| | | |
|---|---|---|
| | | • Entry 49 ರಡಿ ಗಣಿ ಪ್ರದೇಶದ ಮೇಲೆ ತೆರಿಗೆ<br>• Entry 50 ರಡಿ ಖನಿಜ ಹಕ್ಕುಗಳ ಮೇಲೆ ತೆರಿಗೆ<br>V. ಗಣಿಗುತ್ತಿಗೆ ಪ್ರದೇಶದಲ್ಲಿ ಉತ್ಪಾದನೆಯಾಗುವ ಖನಿಜ ಪ್ರಮಾಣವನ್ನು ಆಧರಿಸಿ ತೆರಿಗೆಯನ್ನು ವಿಧಿಸುವ ಅಧಿಕಾರವಿರುತ್ತದೆ.<br>VI. ರಾಜಧನವು ಗಣಿಗುತ್ತಿಗೆ ಪ್ರದೇಶದಲ್ಲಿ ಉತ್ಪಾದನೆಯಾಗುವ ಖನಿಜ ಪ್ರಮಾಣಕ್ಕೆ ಅನುಗುಣವಾಗಿದ್ದು, ರಾಜಧನವನ್ನಾಧರಿಸಿ ತೆರಿಗೆ ವಿಧಿಸಬಹುದಾಗಿರುತ್ತದೆ.<br>VII. ಪ್ರಸ್ತುತ ಎಂ.ಎಂ.ಡಿ.ಆರ್ ಕಾಯ್ದೆಯು ಖನಿಜ ಹಕ್ಕುಗಳ ಮೇಲೆ ತೆರಿಗೆ ವಿಧಿಸಲು ರಾಜ್ಯ ಶಾಸಕಾಂಗಗಳಿಗೆ ಯಾವುದೇ ನಿರ್ಬಂಧ ವಿಧಿಸಿರುವುದಿಲ್ಲ.<br>VIII. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಉತ್ಪಾದಿಸಿದ ಖನಿಜಗಳ ಮೇಲೆ ಮತ್ತು ಗಣಿ ಪ್ರದೇಶದ ಮೇಲೆ ತೆರಿಗೆ ವಿಧಿಸಲು ರಾಜ್ಯ ವಿಧಾನ ಮಂಡಲಕ್ಕೆ ಅಧಿಕಾರವಿರುತ್ತದೆ. ರಾಜಧನವು ತೆರಿಗೆ ಎಂಬ ಪರಿಭಾಷೆಗೆ ಒಳಪಡುವುದಿಲ್ಲವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಿಳಿಸಿ, ದಿನಾಂಕ:01.04.2005ರ ನಂತರ ಪೂರ್ವಾನ್ವಯವಾಗಿ ತೆರಿಗೆ ವಿಧಿಸಲು ಅವಕಾಶ ನೀಡಿರುತ್ತದೆ ಹಾಗೂ ಪೂರ್ವಾನ್ವಯವಾಗಿ ವಿಧಿಸಲಾದ ತೆರಿಗೆ ಮೊತ್ತವನ್ನು ದಂಡ ಮತ್ತು ಬಡ್ಡಿ ರಹಿತವಾಗಿ ದಿನಾಂಕ:01.04.2026 ರಿಂದ 12 ವರ್ಷಗಳೊಳಗಾಗಿ ಪಾವತಿಸಿಕೊಳ್ಳುವಂತೆ ದಿನಾಂಕ:14.08.2024 ರ ಆದೇಶದಲ್ಲಿ ತಿಳಿಸಿರುತ್ತದೆ.<br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ Karnataka (Mineral Rights and Mineral Bearing Land) Tax Bill, 2024 ಅನ್ನು ವಿಧಾನ ಮಂಡಲದಲ್ಲಿ ಮಂಡಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಈ ತೀರ್ಪಿನ ಅನ್ವಯ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸರ್ಕಾರ ವಿಧಿಸುವ ರಾಜಧನ (Royalty) ಮತ್ತು ಹೆಚ್ಚಿನ ತೆರಿಗೆ (Additional Cess) ಗಳಿಂದ ಬರಬಹುದಾದ ಮೊತ್ತವೆಷ್ಟು; ಈ ಬಗ್ಗೆ ಸರ್ಕಾರ ವಹಿಸಿರುವ ಕ್ರಮಗಳು ಯಾವುವು ? (ಪೂರ್ಣ ಮಾಹಿತಿ ನೀಡುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ Karnataka (Mineral Rights and Mineral Bearing Land) Tax Bill, 2024 ಅನ್ನು ವಿಧಾನ ಮಂಡಲದಲ್ಲಿ ಮಂಡಿಸಲು ಕ್ರಮವಹಿಸಲಾಗುತ್ತಿದೆ. ಸದರಿ ವಿಧೇಯಕವು ವಿಧಾನ ಮಂಡಲದಲ್ಲಿ ಅನುಮೋದನೆಗೊಂಡ ನಂತರ ವಿಧೇಯಕ ಜಾರಿಯಾದಲ್ಲಿ ಸುಮಾರು ₹.4,700 ಕೋಟಿಗಳ ಮೊತ್ತವನ್ನು ವಾರ್ಷಿಕವಾಗಿ ಅಂದಾಜಿಸಲಾಗಿದೆ.<br>ಪ್ರಸ್ತಾಪಿತ ವಿಧೇಯಕಕ್ಕೆ ವಿಧಾನ ಮಂಡಲದ ಅನುಮೋದನೆಗೊಂಡ ನಂತರ ಗಣಿಗುತ್ತಿಗೆಗಳಿಗೆ ತೆರಿಗೆ ವಿಧಿಸುವ ಕುರಿತು ಮುಂದಿನ ಅಗತ್ಯ ಕ್ರಮವಹಿಸಲಾಗುವುದು. |

ಸಂಖ್ಯೆ: ಸಿಐ 234 ಎಂಎಂಎಂ 2024

(ಎಸ್.ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು